ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 599/2024

ಪಿ ಡಬ್ಲ್ಯೂಃ 4
ಸಿ ಡಬ್ಲ್ಯೂಃ 7

ಸಾಕ್ಷಿಯ ಹೆಸರು : ಹನುಮಂತಪ್ಪ ಪಟಾತ್

ತಂದೆಯ ಹೆಸರು : ಕರಿಸಿದ್ದಪ್ಪ

ವಯಸ್ಸು : 39

ಉದ್ಯೋಗ : ಅಬಕಾರಿ ನಿರೀಕ್ಷಕರು, ಸವಣೂರು ವಲಯ

ವಾಸಸ್ಥಳ : ಸವಣೂರು

ದಿನಾಂಕಃ 02-02-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ದಿನಾಂಕ 30-11-2020 ರಿಂದ ದಿನಾಂಕ 20-01-2025 ರವರೆಗೆ ರಾಣೇಬೆನ್ನೂರಿನ ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ನಿರ್ವಹಿಸಿರುತ್ತೇನೆ.

2. ದಿನಾಂಕ 10-06-2024 ರಂದು ಮುಂದಿನ ತನಿಖೆಗಾಗಿ ಈ ಕಡತವನ್ನು ಚಾಸಾ 1 ರವರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿರುತ್ತೇನೆ. ದಿನಾಂಕ 14-06-2024 ರಂದು ಮಾದರಿ ಮದ್ಯವನ್ನು ಚಾ ಸಾ 5 ರವರ ಮೂಲಕ ಎಫ್ ಎಸ್ ಎಲ್ ಗೆ ಕಳುಹಿಸಿ, ದಿನಾಂಕ 20-06-2024 ರಂದು ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 15-06-2024 ರಂದು ಆರೋಪಿಯು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಆತನನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾ ಸಾ 4 ರವರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 21-06-2024 ರಂದು ಉಳಿದ ಮುದ್ದೆ ಮಾಲುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕೃತ ಅಧಿಕಾರಿಗಳು ಹಾವೇರಿ ಇವರಿಗೆ ಪತ್ರ ಬರೆದಿರುತ್ತೇನೆ.

3. ದಿನಾಂಕ 10-07-2024 ರಂದು ಘಟನಾ ಸ್ಥಳದ ಮನೆಯ ದಾಖಲೆ ಕುರಿತು ಪಿಡಿಓ, ಗ್ರಾಮ ಪಂಚಾಯತಿ, ರಾಹುತನಕಟ್ಟಿ ಇವರಿಗೆ ಪತ್ರ ಬರೆದು ದಿನಾಂಕ 11-07-2024 ರಂದು ಆರೋಪಿಯ ಹೆಸರಿನಲ್ಲಿರುವ ದಾಖಲೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 15-07-2024 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿರುತ್ತೇನೆ. ಆ ಕಾಲಕ್ಕೆ ಪೋಟೋ ತೆಗೆಸಲಾಯಿತು. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಧೃಢಪಟ್ಟ ಕಾರಣ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತೆತೇನೆ.

4. ಸಾಕ್ಷಿದಾರರು ನಿಪಿ 6 ರ ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕ 10-07-2024 ರ ಪತ್ರವನ್ನು ನಿಪಿ 7 ಎಂದು, ಪಂಚಾಯತಿ ಧೃಢೀಕರಣ ಪತ್ರವನ್ನು ನಿಪಿ 8 ಎಂದು, ಗುನ್ನಾ ಸ್ಥಳದ ಪರಿಶೀಲನಾ ವರದಿಯನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9ಎ ಎಂದು ಗುರುತಿಸಲಾಯಿತು. ಗುನ್ನಾ ಸ್ಥಳದ ಪೋಟೋವನ್ನು ನಿಪಿ 10 ಎಂದು, ಕಲಂ 65 ಬಿ ಅಡಿ ಪ್ರಮಾಣ ಪತ್ರವನ್ನು ನಿಪಿ 11 ಎಂದು, ನಿಪಿ ಯನ್ನು ನಿಪಿ 12 ಎಂದು, ದಿನಾಂಕ 21-06-2024 ರ ಪತ್ರವನ್ನು ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13ಎ ಎಂದು ಗುರುತಿಸಲಾಯಿತು.

5. ಸಾಕ್ಷಿದಾರರು ಮು.ಮಾ.ಗಳನ್ನು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಚಾ ಸಾ 1 ರವರು ನನಗೆ ಕಡತವನ್ನು ನೀಡುವ ಸಮಯದಲ್ಲಿ ಗುನ್ನಾ ಜಾಗದ ಕುರಿತು ಯಾವುದೇ ಪೋಟೋ ನೀಡಿರಲಿಲ್ಲ ಎಂದರೆ ಸರಿ. ನಿಪಿ 10 ರ ಪೋಟೋ ತೆಗೆದ ದಿನಾಂಕ 06-05-2024 ರಂದು ತೆಗೆದ ಪೋಟೋ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ದಿನಾಂಕವು ಪ್ರಕರಣ ನಡೆದ ದಿನಾಂಕವಾಗಿರುವುದಾಗಿ ನುಡಿಯುತ್ತಾರೆ. ನಿಪಿ 10 ರ ದಾಖಲೆಯಲ್ಲಿ ಪೋಟೋ ತೆಗೆದ ದಿನಾಂಕ ನಮೂದಿಸಿರುವುದಿಲ್ಲ ಎಂದರೆ ಸರಿ. ಚಾ ಸಾ 1 ರವರು ಗುನ್ನಾ ಜಾಗದ ಪೋಟೋ ತೆಗೆಯದ ಕಾರಣ ನಾನು ಹೋಗಿ ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ಚಾ ಸಾ 4 ರವರು ತಮ್ಮ ಹೇಳಿಕೆಯಲ್ಲಿ ನನ್ನ ಜೊತೆ ಗುನ್ನಾ ಜಾಗಕ್ಕೆ ಬೇಟಿ ನೀಡಿರುವ

ವಿಷಯ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲಕ್ಕೆ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.